ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಿ.ಡಿ. ಪ್ರಕರಣ

ದಿನಾಂಕ : DATE 7/3/21

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

# ರಾಸಲೀಲೆ ಸೀಡಿ ಪ್ರಕರಣ: ಪೊಲೀಸ್ ತನಿಖೆ ಚುರುಕು

## 'ಸಂತ್ರಸ್ತೆ' ಯುವತಿ ಪತ್ತೆಗೆ ತೀವ್ರ ಹುಡುಕಾಟ

## ಬೆಂಗಳೂರು, ಹೊರಜಿಲ್ಲೆಗಳಲ್ಲಿ ಶೋಧ ಕಾರ್ಯ

**ಕನ್ನಡಪ್ರಭ ವಾರ್ತೆ ಬೆಂಗಳೂರು**

ಮಾಜಿ ಸಚಿವರ ಲೈಂಗಿಕ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಪ್ರಕರಣದ ಸಂತ್ರಸ್ತೆ ಎನ್ನಲಾದ ಯುವತಿ ಪತ್ತೆಗೆ ಬೆಂಗಳೂರು ಹಾಗೂ ಹೊರ ಜಿಲ್ಲೆಗಳಲ್ಲಿ ತೀವ್ರ ಶೋಧ ನಡೆಸಿದ್ದಾರೆ. ಆರ್.ಟಿ.ನಗರದಲ್ಲಿ ನೆಲೆಸಿದ್ದ ಎನ್ನಲಾದ ಯುವತಿ ಲೈಂಗಿಕ ವಿವಾದವು ಬೆಳಕಿಗೆ ಬರುವ ಮುನ್ನವೇ ಪಿ.ಜಿ. ಖಾಲಿ ಮಾಡಿದ್ದಾಳೆ. ಆದರೆ ಎಲ್ಲಿ ಹೋಗಿದ್ದಾಳೆ? ಆಕೆಯ ಹಿನ್ನೆಲೆ ಏನು ಎಂಬ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಗಂಗಾನಗರ ಸಮೀಪದ ಬಾಡಿಗೆ ಕಟ್ಟಡದ ಮಾಲೀಕರೊಬ್ಬರು, ಮಾಜಿ ಸಚಿವರ ಪ್ರಕರಣದಲ್ಲಿ ಕೇಳಿಬಂದಿರುವ ಯುವತಿಯ ಗುರುತು ಪತ್ತೆಹಚ್ಚಿದ್ದಾರೆ. › 6



ಬೆಂಗಳೂರು: ತಮ್ಮ ಬಳಿ 19 ರಾಜಕಾರಣಿಗಳ ಅಶ್ಲೀಲ ವಿಡಿಯೋಗಳಿವೆ ಎಂದು ಹೇಳಿಕೆ ಕೊಟ್ಟಿದ್ದ ಬಳ್ಳಾರಿ ಮೂಲದ ಸಾಮಾಜಿಕ ಕಾರ್ಯಕರ್ತ ರಾಜಶೇಖರ್ ಮುಲಾಲಿಗೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ವಿವರ › 6

# ಸೀಡಿ ಪ್ರಕರಣ: ತನಿಖೆ ಚುರುಕು

ಕ.ಪ್ರ 7/3/21

› ಮೊದಲ ಪುಟದಿಂದ

ಶನಿವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕಟ್ಟಡದ ಮಾಲೀಕರು 'ನಮ್ಮ ಮನೆಯ ಬಾಡಿಗೆ ಕೊಠಡಿಯಲ್ಲಿ ಆಕೆ ನೆಲೆಸಿದ್ದಳು. ಮಾ.1ರಂದು ದಿಢೀರನೇ ಆಕೆ ಕೊಠಡಿ ಖಾಲಿ ಮಾಡಿಕೊಂಡು ಹೋಗಿದ್ದಾಳೆ. ಆದರೆ ಎಲ್ಲಿಗೆ ಹೋದಳು, ಆಕೆ ಹಿನ್ನೆಲೆ ಏನು ಎಂಬುದು ನಮಗೆ ಗೊತ್ತಿಲ್ಲ' ಎಂದರು. ಬಾಡಿಗೆದಾರಳಾದ ಕಾರಣ ಆಕೆಯ ಪರಿಚಯವಿತ್ತು. ಆದರೆ ಖಾಸಗಿ ಯುವತಿಯ ವ್ಯವಹಾರಗಳ ಬಗ್ಗೆ ನನಗೇನೂ ತಿಳಿದಿಲ್ಲ. ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿ ಕೊಠಡಿ ಬಾಡಿಗೆ ಪಡೆದಿದ್ದಳು. ಪ್ರಕರಣ ಬಹಿರಂಗವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವ ಛಾಯಾಚಿತ್ರ ನೋಡಿ ಆಕೆಯ ಗುರುತು ಪತ್ತೆಯಾಯಿತು ಎಂದು ಅವರು ಹೇಳಿದರು.

**19 ಸೀಡಿ ಇದೆ ಎಂದ ಮುಲಾಲಿಗೆ ನೋಟಿಸ್:** ಬೆಂಗಳೂರು: ತಮ್ಮ ಬಳಿ 19 ರಾಜಕಾರಣಿಗಳ ಅಶ್ಲೀಲ ವಿಡಿಯೋಗಳಿವೆ ಎಂದು ಹೇಳಿಕೆ ಕೊಟ್ಟಿದ್ದ ಬಳ್ಳಾರಿ ಮೂಲದ ಸಾಮಾಜಿಕ ಕಾರ್ಯಕರ್ತ ರಾಜಶೇಖರ್ ಮುಲಾಲಿಗೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ಮುಲಾಲಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಮಹಿಳಾ ಹಕ್ಕುಗಳ ಹೋರಾಟಗಾರರೊಬ್ಬರು ದೂರು ನೀಡಿದ್ದಾರೆ. ಮಾಜಿ ಸಚಿವರ ಲೈಂಗಿಕ ಪ್ರಕರಣ ಬೆಳಕಿಗೆ ಬಂದ ಮರುದಿನ ಸುದ್ದಿಗೋಷ್ಠಿ ನಡೆಸಿದ್ದ ರಾಜಶೇಖರ್, ತನ್ನನ್ನು ವ್ಯಕ್ತಿಯೊಬ್ಬರು ಭೇಟಿಯಾಗಿ 19 ರಾಜಕಾರಣಿಗಳ ಲೈಂಗಿಕ ಪ್ರಕರಣದ ವಿಡಿಯೋಗಳ ಬಹಿರಂಗಕ್ಕೆ ನೆರವು ಕೋರಿದ್ದರು ಎಂದಿದ್ದರು.

**ಕಲ್ಲಹಳ್ಳಿ ವಿರುದ್ಧ ಮತ್ತೊಂದು ದೂರು:** ಮಾಜಿ ಸಚಿವರ ಲೈಂಗಿಕ ಪ್ರಕರಣ ಬಹಿರಂಗಗೊಳಿಸಿ ಸಂಚಲನ ಮೂಡಿಸಿರುವ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿಗೆ ಮತ್ತಷ್ಟು ಸಂಕಟ ಎದುರಾಗಿದ್ದು, ಅವರ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಶನಿವಾರ ಮತ್ತೊಂದು ದೂರು ದಾಖಲಾಗಿದೆ.

ತಮ್ಮ ಬಳಿ ರಾಜಕಾರಣಿಗಳ ಲೈಂಗಿಕ ವಿವಾದದ ಸಿ.ಡಿ.ಗಳಿವೆ ಎಂದು ಹೇಳಿಕೆ ನೀಡಿ ಮಹಿಳೆಯರ ಗೌರವಕ್ಕೆ ಚ್ಯುತಿ ತಂದಿರುವ ದಿನೇಶ್ ಕಲ್ಲಹಳ್ಳಿ ಮತ್ತು ರಾಜಶೇಖರ ಮುಲಾಲಿ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮಂಡ್ಯ ಜಿಲ್ಲೆಯ ಮಾನವ ಹಕ್ಕುಗಳ ಸೇವಾ ಸಮಿತಿ ಜಿಲ್ಲಾ ಅಧ್ಯಕ್ಷೆ ಕೆ.ಎಚ್.ಇಂದಿರಾ ದೂರು ನೀಡಿದ್ದಾರೆ.

ತಮ್ಮ ಬಳಿ ಮೂರು ಸಿ.ಡಿ.ಗಳಿವೆ ಎಂದು ದಿನೇಶ್ ಹೇಳಿದ್ದರೆ, ರಾಜಶೇಖರ ಮುಲಾಲಿ 19 ರಾಜಕೀಯ ಮುಖಂಡರ ಸೆಕ್ಸ್ ಸಿ.ಡಿ.ಗಳಿವೆ ಎಂದಿದ್ದಾರೆ. ಈ ಇಬ್ಬರನ್ನು ತಕ್ಷಣ ಬಂಧಿಸಿ ಇವರ ಹಿಂದೆ ಇರುವ ವ್ಯಕ್ತಿಗಳನ್ನು ಪತ್ತೆಹಚ್ಚಬೇಕು. ಅಮಾಯಕ ಹೆಣ್ಣು ಮಕ್ಕಳನ್ನು ಬಳಸಿಕೊಂಡು ಹನಿಟ್ರ್ಯಾಪ್ ದಂಧೆ ನಡೆಸಿ, ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಇಂತಹ ವಿಡಿಯೋಗಳನ್ನು ತಮ್ಮ ದುರುದ್ದೇಶಕ್ಕೆ ಬಹಿರಂಗ ಮಾಡಿ ಮಹಿಳೆಯರ ಕುಲದ ಶೋಷಣೆ ಮಾಡುತ್ತಿದ್ದಾರೆ ಎಂದು ಇಂದಿರಾ ಕಿಡಿಕಾರಿದ್ದಾರೆ.